# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



1,25,000+
Digital E-PAPER READERS
To book Classified Display Ad in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper


epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 272 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.05.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 272 • PRGI No:KARKAN/2023/88055 • VIJAYANAGARA • 06.05.2025 • Tuesday • Page:04 • Rs:2


## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ

ಇನ್‌ಸ್ಟಾಗ್ರಾಮ್ ಫೇಸ್ಬುಕ್ ವಧು-ವರರ ವೇದಿಕೆ





**Call Us for Advertisements**
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

Visit for update
www.hampitimes.com
epaper.hampitimes.com


# ಕನ್ನಡ ಮಾಧ್ಯಮದ ಟಾಪರ್ ಇಂದುಶ್ರೀ

## ಇತರರಿಗೆ ಪ್ರೇರಣೆ । ಸರ್ಕಾರಿ ಬಾಲಕಿಯರ ಪ್ರೌಢಶಾಲೆ(ಮಾ.ಪು) ವಿದ್ಯಾರ್ಥಿನಿಗೆ 612 ಅಂಕ

### ಸ್ವಂತ ಸೂರಿಲ್ಲ ಮನೆಯಲ್ಲಿ ಕಿತ್ತುತಿನ್ನುವ ಬಡತನ । ತಗ್ಗದ ಓದಿನ ಹಂಬಲ । ಹೆತ್ತವರ ಕಣ್ಣಲ್ಲಿ ಆನಂದಭಾಷ್ಪ ಭವಿಷ್ಯದ ಶಿಕ್ಷಣಕ್ಕೆ ಬೇಕಿದೆ ಸಹಕಾರ । ಜನಪ್ರತಿನಿಧಿಗಳು ಕನ್ನಡ ಮಾಧ್ಯಮದ ಮಕ್ಕಳನ್ನು ಗುರುತಿಸಲಿ



■ ಹಂಪಿ ಟೈಮ್ಸ್ ಹೊಸಪೇಟೆ

ಕುಟುಂಬದಲ್ಲಿ ಬಡತನ ಕಿತ್ತು ತಿನ್ನುತ್ತಿದ್ದರೂ, ಮೂಲಭೂತ ಸೌಲಭ್ಯಗಳ ಕೊರೆತೆಗಳ ನಡುವೆ ಓದಲೇಬೇಕೆಂಬ ಸಂಕಲ್ಪ ಮಾಡಿ, ತನ್ನದೇ ಆದ ದೃಷ್ಟಿಕೋನದಲ್ಲಿ ಯೋಜನೆ ರೂಪಿಸಿಕೊಂಡು, ಮೊಬೈಲ್‌ಗೆ ಅಂಟಿಕೊಳ್ಳದೇ, ಸರ್ಕಾರಿ ಬಾಲಕಿಯರ ಪ್ರೌಢಶಾಲಾ(ಮಾ.ಪು) ಶಿಕ್ಷಕರ ಮಾರ್ಗದರ್ಶನ, ತರಬೇತಿಯಡಿ ಸಿದ್ಧಗೊಂಡು ಎಸ್ಸೆಸ್ಸೆಲ್ಸಿಯಲ್ಲಿ ಇಂದುಶ್ರೀ 625ಕ್ಕೆ 612 ಅಂಕ ಪಡೆದು, ತಾಲೂಕಿಗೆ ಕನ್ನಡ ಮಾಧ್ಯಮದ ಟಾಪರ್ ಆಗಿ ಹೊರಹೊಮ್ಮಿದ್ದಾಳೆ.

ತನ್ನ ತಂದೆ ಎನ್.ವೆಂಕಟೇಶ್, ತಾಯಿ ಎನ್.ನಿರ್ಮಲಾ ಅವರಿಗೆ ಸಂತಸ ತರುವುದರ ಜೊತೆ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಯ ಕೀರ್ತಿಯನ್ನು ಇಂದುಶ್ರೀ ಹೆಚ್ಚಿಸಿದ್ದಾಳೆ.

ಹೌದು.. ಸರ್ಕಾರಿ ಶಾಲೆಗಳಲ್ಲಿ ಕಲಿತ ಬಡ ವಿದ್ಯಾರ್ಥಿಗಳು ಎಂತಹ ಕಠಿಣ ಸಂದರ್ಭಗಳಲ್ಲೂ ಎದೆಗುಂದದೆ, ಸೌಲಭ್ಯಗಳ ಕೊರತೆಯ ನಡುವೆಯೂ ಗಟ್ಟಿಕಾಳುಗಳಂತೆ ಸಮಾಜವೇ ನಿಬ್ಬೆರಗಾಗಿ ನೋಡುವು ರೀತಿಯಲ್ಲಿ ಈ ಶಾಲೆಯ ಮಕ್ಕಳು ಪ್ರತಿ ವರ್ಷ ತಮ್ಮ ಪ್ರತಿಭೆಯನ್ನು ಹೊರಹಾಕುತ್ತಿದ್ದಾರೆ ಎಂಬ ತಾಜಾ ನಿದರ್ಶನಕ್ಕೆ ಇಂದುಶ್ರೀ ಸಾಕ್ಷಿಯಾಗಿದ್ದಾಳೆ.

ಕನ್ನಡ ಮಾಧ್ಯಮದಲ್ಲೇ ಓದಿ ತಾಲೂಕಿಗೆ ಅಗ್ರಸ್ಥಾನ ಪಡೆದ ವಿದ್ಯಾರ್ಥಿನಿಗೆ ಸನ್ಮಾನಿಸಲು ತೆರಳಿದ ಪ್ರಭಾರ ಬಿಇಒ ಶೇಖರಪ್ಪ ಹೊರಪೇಟೆ, ನಿವೃತ್ತ ಬಿಇಒ ಎಂ. ಚನ್ನಬಸಪ್ಪ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಸುಧಾ ಆಚ್ಚರಿಗೊಳಗಾಗಿ ಭಾವುಕರಾದರು. ಮಗಳ ಸಾಧನೆ ಗುರುತಿಸಿ ಶಿಕ್ಷಣ ಇಲಾಖೆಯೇ ಮನೆಗೆ ಬಂದರೂ ಮನೆಯೊಳಗೆ ಮಗಳನ್ನು ಸನ್ಮಾನಿಸುವಷ್ಟು ಜಾಗವಿಲ್ಲದ ಬಾಡಿಗೆ ಮನೆಯಲ್ಲಿ ಮೂರು ಹೆಣ್ಣುಮಕ್ಕಳೊಂದಿಗೆ ತಂದೆ ತಾಯಿ ದಿನಗೂಲಿ ಮಾಡಿ ಜೀವನ ನಡೆಸುತ್ತಿರುವುದನ್ನು ಕಂಡ ಅಧಿಕಾರಿಗಳ ಕಣ್ಣಾಲೆಗಳು ತೇವಗೊಂಡವು. ಇಂತಹ ಪರಿಸ್ಥಿತಿಯ ನಡುವೆಯೂ ಶೈಕ್ಷಣಿಕ ಪ್ರಗತಿ ಸಾಧಿಸಿದ ಬಾಲಕಿಗೆ ಮನೆ ಮುಂದಿನ ಓಣಿ ರಸ್ತೆಯಲ್ಲೆ ಸಿಹಿ ತಿನ್ನಿಸಿ ಸನ್ಮಾನಿಸಲಾಯಿತು. ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು, ಮನೆಯ ಅಕ್ಕಪಕ್ಕದವರೂ ವಿದ್ಯಾರ್ಥಿನಿಯ ಸಾಧನೆಗೆ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದರು.

ಶಾಲೆಯ ಮುಖ್ಯಶಿಕ್ಷಕರು, ವಿಷಯ ಶಿಕ್ಷಕರು ನಮ್ಮೆಲ್ಲಾ ಪ್ರಶ್ನೆಗಳಿಗೆ ಎಂದೂ ಬೇಸರಿಸಿಕೊಳ್ಳದೇ ಮಾರ್ಗದರ್ಶನಮಾಡಿ ನನ್ನ ಪ್ರಗತಿಗೆ ಕಾರಣರಾಗಿದ್ದಾರೆ ಎಂದು ವಿದ್ಯಾರ್ಥಿನಿ ಇಂದುಶ್ರೀ ಶಾಲೆಯ ಶಿಕ್ಷಕರ ಬಗ್ಗೆ ಹೆಮ್ಮೆಯ ಮಾತನಾಡಿ, ಮುಂಬರುವ ವಿದ್ಯಾರ್ಥಿಗಳಿಗೆ ಹೇಗೆ ಟಾಪರ್ ಆಗಬಹುದು ಎಂಬುದನ್ನು ಸಹ ವಿವರಿಸಿದಳು. ಇಂತಹ ಪ್ರತಿಭಾವಂತ ಕನ್ನಡ ಮಾಧ್ಯಮದಲ್ಲಿ ತಾಲೂಕಿಗೆ ಟಾಪರ್ ಆದ ವಿದ್ಯಾರ್ಥಿನಿಯ ಭವಿಷ್ಯದ ಶೈಕ್ಷಣಿಕ ಕನಸು ನನಸಾಗಿಸಲು ಜನಪ್ರತಿನಿಧಿಗಳು, ಶಿಕ್ಷಣಪ್ರೇಮಿಗಳು ಸಹಕಾರ ನೀಡಿ ಪ್ರೋತ್ಸಾಹಿಸಬೇಕಿದೆ.



ಶೈಕ್ಷಣಿಕ ಪ್ರಗತಿಗೆ ಬಡತನ ಅಡ್ಡಿಯಾಗದು ಎಂಬುದಕ್ಕೆ ಇಂದುಶ್ರೀ ಸಾಕ್ಷಿಯಾಗಿದ್ದಾಳೆ. ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಯ ಶಕ್ತಿಯನ್ನು ಹೊರಹಾಕಿದ್ದಾಳೆ. ವಿದ್ಯಾರ್ಥಿನಿಯ ಭವಿಷ್ಯ ಉಜ್ವಲವಾಗಿರಲಿ.

– ಶೇಖರಪ್ಪ ಹೊರಪೇಟೆ ಪ್ರಭಾರ ಬಿಇಒ, ಹೊಸಪೇಟೆ



ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೇಳಿದ್ದನ್ನೆಲ್ಲ ಕಲ್ಪಿಸುವ ಪಾಲಕರಿದ್ದರೂ ಶಿಕ್ಷಣದಲ್ಲಿ ಆಸಕ್ತಿ ತೋರದ ಮಕ್ಕಳೂ ಇದ್ದಾರೆ. ಅಂತಹವರ ನಡುವೆ ಸೌಲಭ್ಯಗಳ ಕೊರತೆ, ಓದಿಗೆ ಉತ್ತಮ ಪರಿಸರ ಇಲ್ಲದಿದ್ದರೂ ಶಿಕ್ಷಣದಲ್ಲಿ ಉತ್ತಮ ಪ್ರಗತಿ ಸಾಧಿಸಿದ ಇಂದುಶ್ರೀ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಯ ಹೆಮ್ಮೆಯ ವಿದ್ಯಾರ್ಥಿಯಾಗಿದ್ದಾಳೆ.

– ಎಂ.ಚನ್ನಬಸಪ್ಪ ನಿವೃತ್ತ ಬಿಇಒ, ಹೊಸಪೇಟೆ



ವರ್ಷದ ಆರಂಭದಿಂದಲೂ ಓದಿನತ್ತ ಮುಖ ಮಾಡಿದ್ದಳು. ತನಗಿರುವ ಗೊಂದಲಗಳಿಗೆ ಶಿಕ್ಷಕ ರನ್ನು ಕೇಳಿ ಪರಿಹಾರ ಕಂಡುಕೊಳ್ಳುತ್ತಿದ್ದಳು. ಶಿಕ್ಷಕರ ಮಾರ್ಗದರ್ಶದೊಂದಿಗೆ ನಿರಂತರ ಪರಿಶ್ರಮ ಪ್ರತಿಫಲವಾಗಿ ತಾಲೂಕಿಗೆ ಟಾಪರ್ ಆಗಿ ಹೊರಹೊಮ್ಮಿ ಎಲ್ಲರಿಗೂ ಹರ್ಷ ತಂದಿದ್ದಾಳೆ.

– ಪ್ರವೀಣಾ ಬಿ.ಹಲಗಣಿ ಮು.ಶಿ. ಸ.ಬಾ.ಪ್ರೌ.ಶಾಲೆ(ಮಾ.ಪು) ಹೊಸಪೇಟೆ




ಎಸ್ಸೆಸ್ಸೆಲ್ಸಿ ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ?



ಕ್ಯೂರ್ ಕೋಡ್ ಸ್ಕ್ಯಾನ್ ಮಾಡಿ
ಇಂದುಶ್ರೀ
ಮಾತಲ್ಲೆ ಕೇಳಿ....

scan to watch video

ಕ್ರೀಡಾ ಪ್ರಯಾಣ ರೋಚಕ

# ಕೊಪ್ಪ ಟು ದಕ್ಷಿಣ ಕೊರಿಯ

ಶಾನುವಳ್ಳಿ ರೈತನ ಮಗಳು ಸ್ನೇಹ.ಎಸ್,ಎಸ್. ಅಂತರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆ ಕರೋನದ ಕರಾಳತೆಯ ನಡುವೆ ಅಂದುಕೊಂಡ ಸಾಧನೆಯನ್ನು ಮಾಡಿಯೇ ತೀರಬೇಕೆಂದು ಹಠ ಇಡಿದು ತರಬೇತಿಯಲ್ಲಿ ತೊಡಗಿ ಸಾಧನೆ ಮಾಡಿ ತೋರಿಸಿದ್ದಾರೆ.

ಅಂದು ಸ್ನೇಹರವರು ಇದು ನನ್ನಿಂದ ಸಾಧ್ಯವಿಲ್ಲ ಎಂದು ಕೈ ಚೆಲ್ಲಿ ಕುಳಿತಿದ್ದರೆ ಇಂದು ಅಂತರಾಷ್ಟ್ರೀಯ ಮಟ್ಟಕ್ಕೆ ಸಾಗಲು ಸಾಧ್ಯವಾಗುತ್ತಿರಲಿಲ್ಲ. ಸಾಧಕೀಯ ಕ್ರೀಡಾ ಸಾಧನೆಯ ಕ್ರಮಿಸುವ ಹಾದಿ ಸುಗಮ ವಾಗಿರಲಿಲ್ಲ ಭೀಕರ ಕರೋನ ಯಾರನ್ನು ಹತ್ತಿರ ಸುಳಿಯದಂತೆ ಮಾಡಿತ್ತು. ಧೃತಿಗೆಡದೆ ತಂದೆಯವರ ಸಹಾಯ ಪಡೆದು ಒಂದಿಷ್ಟು ವ್ಯಾಯಾಮದ ಸಲಕರಣೆಗಳನ್ನು ನೈಸರ್ಗಿಕವಾಗಿ ಸಿದ್ಧಪಡಿಸಿಕೊಂಡು ನಿಲುವಾಗಿಲು ಶಾಲೆಯ ಆಟದ ಮೈದಾನದಲ್ಲಿ ಕಸರತ್ತು ಮಾಡಲು ಆರಂಭಿಸಿ ಕಷ್ಟವಾದುದನ್ನು ಸಾಧಿಸಿ ತೋರಿಸಿದ್ದಾರೆ. ಈ ಪ್ರಯಾಣದಲ್ಲಿ ತಂದೆಯವರ ಸಹಕಾರ ಸಾಕಷ್ಟಿದ್ದು ತಮಗೆ ಸಿಕ್ಕ ಸಲಕರಣೆಗಳನ್ನು ಮಗಳ ದೈಹಿಕ ಸದೃಢತೆಗೆ ಜಿಮ್ ಆಗಿ ಪರಿವರ್ತಿಸಿದ್ದನ್ನು ತರಬೇತಿಗೆ ಸಿದ್ಧತೆ ಮಾಡಿಕೊಟ್ಟಿದ್ದನ್ನು ನಾವೆಲ್ಲರೂ ಮೆಚ್ಚಿಕೊಳ್ಳಲೇಬೇಕು. ತಂದೆ-ಸತ್ಯನಾರಾಯಣ ತಾಯಿ -ಶಾಲಿನಿ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಶಾನುವಳ್ಳಿಯವರು ಇಂದಿಗೂ ವ್ಯವಸಾಯ ಮಾಡುವುದನ್ನು ನಿಲ್ಲಿಸಿಲ್ಲ.

ಬಾಲ್ಯದಲ್ಲಿ ಛಲ ಇವರ ಜೀವನದಲ್ಲಿ ಇಷ್ಟು ಸಾಧನೆ ಮಾಡಲು ಸಾಧ್ಯವಾಗಿಸಿದೆ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ಮನರಂಜನಾ ಆಟಗಳನ್ನು, ಬೇರೆ ಬೇರೆ ಕ್ರೀಡೆಗಳನ್ನು ಮುಖ್ಯ ಶಿಕ್ಷಕರಾದ ಪ್ರಭಾಕರ್ ಹಾಗೂ ಇತರೆ ಸಹ ಶಿಕ್ಷಕರು ಆಡಿಸುತ್ತಿದ್ದರು ಆಗ ಪಡೆದ ಬಹುಮಾನಗಳು ಮುಂದೆ ಎಂದಾದರೂ ರಾಷ್ಟ್ರೀಯ ಮಟ್ಟದಲ್ಲಿ ಪದಕ ಪಡೆದು ತಿರಬೇಕೆಂಬುದು ಇವರ ಬಾಲ್ಯದಲ್ಲಿಯೇ ಮನದಲ್ಲಿ ಮೂಡಿತ್ತು. ಶಾಲೆಯಲ್ಲಿ ಗೆದ್ದಾಗ ಪೋಷಕರು,ಸುತ್ತ ನೆರೆದಿದ್ದ ಸ್ನೇಹಿತರು ಹಾಗೂ ಶಿಕ್ಷಕರ ತಟ್ಟುತ್ತಿದ್ದ ಚಪ್ಪಾಳೆಯ ಸದ್ದು ಇಂದು ದೇಶವೇ ತಿರುಗಿ ನೋಡುವಂತಹ ಸಾಧನೆಯನ್ನು ಮಾಡಲು ಸ್ಪೂರ್ತಿ ಅದಕ್ಕಾಗಿ ಅವರು ಆಯ್ಕೆ ಮಾಡಿಕೊಂಡ ಕ್ಷೇತ್ರವೇ ಕ್ರೀಡೆ ಅದರಲ್ಲಿಯೂ ಮುಖ್ಯವಾಗಿ 100 ಮೀಟರ್ ದೂರದ ಓಟ, 400 *100 ರಿಲೇ ಹಾಗೂ ಲಾಂಗ್ ಜಂಪ್ ಆಯ್ಕೆ ಮಾಡಿಕೊಂಡು ಸಾಧನೆಯನ್ನು ಮುಂದುವರಿಸಿದ್ದಾರೆ.

ಮೊದಮೊದಲು ಪೋಷಕರಿಗೆ ತಮ್ಮ ಮಗಳು ಕ್ರೀಡೆಯನ್ನು ಆಯ್ದುಕೊಂಡಿ ರುವುದು ಇಷ್ಟವಿರಲಿಲ್ಲ ಕಾರಣ ಇದ್ದ ಒಬ್ಬ ಮಗಳು ಇಷ್ಟೊಂದು ಕಠಿಣ ಶ್ರಮ ಪಡುತ್ತಿರುವುದು ಹಾಗೂ ಅವಳು ಬೆವರು ಬಸಿಯುವುದನ್ನು ಕಣ್ಣಾರೆ ನೋಡಲು ಅವರಿಗೆ ಇಷ್ಟವಿರಲಿಲ್ಲ ಅದೆಷ್ಟೋ ಬಾರಿ ತಂದೆ ಮತ್ತು ತಾಯಿ ಇದನ್ನು ಮುಂದುವರಿ ಸುವುದು ಬೇಡ ಇಲ್ಲಿಗೆ ನಿಲ್ಲಿಸಿ ಬಿಡು ಎಂದಾಗ ಸ್ನೇಹ ಯಾವುದೇ ಕಾರಣಕ್ಕೂ ಇದನ್ನು ಕೈ ಬಿಡುವ ಮಾತೇ ಇಲ್ಲ ಮುಂದೊಂದು ದಿನ ನೀವು ಸಂತೋಷ ಪಡುವಂತಹ ಸಾಧನೆ ಮಾಡಿಯೇ ತೋರಿಸುತ್ತೇನೆ ಎಂದು ತರಬೇತಿ ಯನ್ನು ಮುಂದು ವರೆಸಿದ್ದು ಇಂದು ಸಿಹಿ ನೆನಪು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ದಾವಣಗೆರೆಯಲ್ಲಿ ನಡೆದ ಪ್ರೌಢಶಾಲೆಗಳ ರಾಜ್ಯಮಟ್ಟದ ಮೇಲಾಟ ಸ್ಪರ್ಧೆಯಲ್ಲಿ ಇವರು ಮೊಟ್ಟ ಮೊದಲು ಉದ್ದ ಜಿಗಿತ ತೃತೀಯ ಸ್ಥಾನಗಳಿಸಿ ಕಂಚಿನ ಪದಕ ಪಡೆದಾಗ ಮಗಳು ಮುಂದೊಂದು ದಿನ ಏನನ್ನಾದರೂ ಸಾಧಿಸುವಳೆಂಬ ಬಯಕೆ ಪೋಷಕರಲ್ಲಿ ಮೂಡಿದ್ದು ನಿಜ.

ಇವರಲ್ಲಿದ್ದ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಈ ಸಾಧನೆಗೆ ಬೆಂಬಲವಾಗಿ ನಿಂತವರು ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಸಿದ್ದರಾಜು ಇವರ ಮಾರ್ಗದರ್ಶನದಂತೆ ಮುಂದೆ ಎಸ್,ಡಿ,ಎಂ.ಶಿಕ್ಷಣ ಸಂಸ್ಥೆಯಲ್ಲಿ ಕ್ರೀಡಾಕೋಟಾದಡಿ ಉಚಿತ ಶಿಕ್ಷಣಕ್ಕೆ ಅವಕಾಶ ಸಿಕ್ಕಿತು ಅಲ್ಲಿನ ತರಬೇತುದಾರರಾದ ಬಿ,ಟಿ. ಮಾನೆ, ಸಂದೇಶ್,ನಿಖಿಲ್ ಜೋಸೆಫ್ ಇವರ ಮಾರ್ಗದರ್ಶನದಲ್ಲಿ ಸರಿಯಾದ ಕ್ರೀಡಾತರಬೇತಿ ದೊರೆತು ರಾಷ್ಟ್ರೀಯ ಪದಕಗಳ ಬೇಟೆ ಆರಂಭವಾಯಿತು.

2019 ಕೇರಳದಲ್ಲಿ ಉನ್ನತ ವ್ಯಾಸಂಗಕ್ಕಾಗಿ ತೆರಳಿದರು ಅಲ್ಲಿ ವಿನಯ್ ಮತ್ತು ಜಗದೀಶ್ ರವರ ಮಾರ್ಗದರ್ಶನ ಇನ್ನಷ್ಟು ಸಾಧನೆಗೆ ಪೂರಕವಾಯಿತು. ಎಂ,ಕಾಂ.ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಲಾಂಗ್ ಜಂಪ್ ಮತ್ತು ಆಂತರ ವಿಶ್ವವಿದ್ಯಾಲಯದ ರಿಲೇಯಲ್ಲಿ ಕೂಟ ದಾಖಲೆಯನ್ನು ಹೊಂದಿರುತ್ತಾರೆ.

100 ಮೀಟರ್ ಓಟದಲ್ಲಿ ಆಲ್ ಇಂಡಿಯಾ ಮಟ್ಟದ 04ನೇ ಸ್ಥಾನ,ಖೇಲೂ ಇಂಡಿಯಾ 100 ಮೀಟರ್ ಓಟದಲ್ಲಿ ಕಂಚಿನ ಪದಕವನ್ನು ಪಡೆದಿರುತ್ತಾರೆ. 2023ರಲ್ಲಿ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ತಮ್ಮ ಓಟವನ್ನು ಮುಂದುವರಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವಂತಹ ತರಬೇತಿಯನ್ನು ಅಜಿತ್ ಇವರು ನೀಡಿ ಮುಂದುವರಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆ ಇಲ್ಲಿ 2023ರಂದು ಉದ್ಯೋಗವನ್ನು ಪಡೆದು ಸದ್ಯ ಮಂಗಳೂರು ಬ್ರಾಂಚ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಮ್ಮ ಕ್ರೀಡಾ ಜೀವನದಲ್ಲಿ ಸಹಕಾರ ನೀಡಿದ ಪೋಷಕರಿಗೂ,ಸ್ನೇಹಿತರಿಗೂ ತರಬೇತುದಾರರಿಗೆ,ವಿದ್ಯಾಭ್ಯಾಸ ನೀಡಿದ ಶಿಕ್ಷಕರಿಗೆ ಹಾಗೂ ಆಳ್ವಾಸ್ ಕಾಲೇಜಿನ ಮೋಹನ್ ಆಳ್ವಾರವರ ಸಹಕಾರವನ್ನು ಸದಾ ಸ್ಮರಿಸುತ್ತಾರೆ ಸಾಧಕಿ ಸ್ನೇಹ.

ಮಲೆನಾಡಿನ ಹಳ್ಳಿಗಳಲ್ಲಿ ಸಾಕಷ್ಟು ಕ್ರೀಡಾ ಪ್ರತಿಭೆಗಳು ಕಣ್ಣಿಗೆ ಕಾಣದಂತೆ ಮುದುಡಿ ಹೋಗುತ್ತಿವೆ ಅಂತಹ ಪ್ರತಿಭೆಗಳನ್ನು ರಾಷ್ಟ್ರಮಟ್ಟದಲ್ಲಿ ಬೆಳೆಯುವಂತೆ ಮಾಡಲು ಪ್ರತಿ ತಾಲೂಕುಗಳಲ್ಲಿ ಉನ್ನತ ದರ್ಜೆಯ ಕ್ರೀಡಾಂಗಣ,ಖಾಯಂ ತರಬೇತುದಾರರನ್ನು ನೇಮಕ ಮಾಡಿ ಪ್ರತಿ ಹಳ್ಳಿಗಳಲ್ಲೂ ಆಯ್ಕೆ ಪ್ರಕ್ರಿಯೆ ನಡೆಸಿ ತರಬೇತಿ ನೀಡಿದರೆ ಅನುಕೂಲವಾಗುತ್ತದೆ ಎಂದು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತಾ ಬಹು ಮುಖ್ಯವಾಗಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕ ಇನ್ನಷ್ಟು ಪ್ರತಿಭೆಗಳನ್ನು ಗುರುತಿಸಿ ಮುನ್ನೆಲೆಗೆ ತರಲು ಸಹಕಾರಿ ಎಂದು ತಮ್ಮ ಶಿಕ್ಷಕರನ್ನು ನೆನೆಯುತ್ತಾರೆ ಸಾಧಕಿ.

ಇಂತಹ ವಿದ್ಯಾರ್ಥಿನಿ ನಮ್ಮ ವೃತ್ತಿ ಜೀವನದಲ್ಲಿ ಸಿಕ್ಕಿದ್ದು ನಿಜಕ್ಕೂ ಪುಣ್ಯ ಇವರ ಗುರಿ ಹಾಗೂ ಕಠಿಣ ಅಭ್ಯಾಸ ಇವರನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ ಮುಂದೊಂದು ದಿನ ಅಂತರಾಷ್ಟ್ರೀಯ ಪದಕ ಪಡೆಯುವುದರಲ್ಲಿ ಅನುಮಾನವಿಲ್ಲ ಎಂದು ಹೇಳುತ್ತಾರೆ ಇವರ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಾದ ಸಿದ್ಧರಾಜು.

2025 ಮೇ 27ರಂದು ದಕ್ಷಿಣ ಕೊರಿಯಾದಲ್ಲಿ ನಡೆಯಲಿರುವ ಏಷಿಯನ್ ಚಾಂಪಿಯನ್ಶಿಪ್ ರಿಲೇ ತಂಡದಲ್ಲಿನ ಆಯ್ಕೆ ಹಾಗೂ ಭಾಗವಹಿಸುತ್ತಿರುವುದು ಮಗಳ ಈ ಸಾಧನೆ ನಿಜಕ್ಕೂ ಹೆಮ್ಮೆಯ ಸಂಗತಿ ಇಂತಹ ಮಗಳನ್ನು ಪಡೆದದ್ದು ನಿಜಕ್ಕೂ ಪುಣ್ಯ ಮೊದಮೊದಲು ಇಷ್ಟವಿಲ್ಲದಿದ್ದರೂ ಈಗ ಅತೀವ ಸಂತೋಷ ಇವರ ಸಾಧನೆಯಿಂದ ದೊರೆತಿದೆ ಎಂದು ಹರ್ಷ ವ್ಯಕ್ತಪಡಿಸುತ್ತಾರೆ ಪೋಷಕರು. ಮುಂದಿನ ದಿನಗಳಲ್ಲಿ ನಿಮ್ಮೆಲ್ಲಾ ಗುರಿಗಳು ಈಡೇರಲಿ ಆ ಮೂಲಕ ಭಾರತ ದೇಶಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕಗಳು ಲಭಿಸಲಿ ಎಂದು ಹಾರೈಸುತ್ತೇವೆ.



## ಆಯ್ದ ಕ್ರೀಡಾ ಸಾಧನೆ ಮತ್ತು ಪ್ರಶಸ್ತಿಗಳು

2023(ಗೋವಾ)ನ್ಯಾಷನಲ್ ಗೇಮ್ಸ್ 100 ಮೀ, ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ.
2023(ಬೆಂಗಳೂರು) ಓಪನ್ ನ್ಯಾಷನಲ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ 100 ಮೀ,ಓಟ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ.
2024 (ಭುವನೇಶ್ವರ್)ಸೀನಿಯರ್ ನ್ಯಾಷನಲ್ ಫೆಡರೇಷನ್ ಅಥ್ಲೆಟಿಕ್ಸ್ 100 ಮೀ, ಓಟ ಸ್ಪರ್ಧೆಯಲ್ಲಿ ಚಿನ್ನದ ಪದಕ.
2024 (ಬೆಂಗಳೂರು)ಇಂಡಿಯನ್ ಗ್ರಾಂಡ್ ಫಿಕ್ಸ್-3 ಓಟ ಸ್ಪರ್ಧೆಯಲ್ಲಿ ಚಿನ್ನದ ಪದಕ.
2024 (ಹರಿಯಾಣ)ಇಂಟರ್ ಸ್ಟೇಟ್ ಸೀನಿಯರ್ ನ್ಯಾಷನಲ್ ಅಥ್ಲೆಟಿಕ್ಸ್ 100 ಮೀ,ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ.
2024 (ಬೆಂಗಳೂರು)ಓಪನ್ ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ನಲ್ಲಿ 100 ಮೀ ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ.
2025 ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ಕ್ರೀಡಾಕೂಟದ 100 ಮೀ ಓಟ ಸ್ಪರ್ಧೆಗಳಲ್ಲಿ ಭಾಗವಹಿಸಿ ನ್ಯಾಷನಲ್ ಫೆಡರೇಷನ್ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್ ನಲ್ಲಿ ಕಂಚಿನ ಪದಕ,ಇಂಡಿಯನ್ ಗ್ರಾಂಡ್ ಫಿಕ್ಸ್-1 ಬೆಳ್ಳಿ ಪದಕ ಹಾಗೂ ಓಪನ್ ಅಥ್ಲೆಟಿಕ್ ಮೀಟ್ ನಲ್ಲಿ ಚಿನ್ನದ ಪದಕ.
ಇದಲ್ಲದೆ ರಿಲೇ ಮತ್ತು ಲಾಂಗ್ ಜಂಪ್ ನಲ್ಲಿ ಭಾಗವಹಿಸಿ ಹಲವು ಪದಕಗಳನ್ನು ಪಡೆದಿದ್ದಾರೆ.
ಇವರ ಸಾಧನೆಯನ್ನು ಪರಿಗಣಿಸಿ ಭುವನೇಶ್ವರ್ ಸ್ಪೋರ್ಟ್ಸ್ ಸೈನ್ಸ್ ಆಫ್ ಇಂಡಿಯಾ ಕರ್ಣ ಪ್ರಶಸ್ತಿ-2024 ಹಾಗೂ ಕೊಪ್ಪ ತಾಲೂಕು ಆಡಳಿತ ರಾಜ್ಯೋತ್ಸವ ಪ್ರಶಸ್ತಿ-2024 ನೀಡಿ ಗೌರವಿಸಿದೆ.

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಪೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ರೀಲ್ಸ್‌ಗಿಂತ ರಿಯಲ್ ಮುಖ್ಯ

## ನಮಗಂತೂ ಇದನ್ನ ಹೆಂಗಪ್ಪ ಬಿಡಿಸೋದು ಅನ್ನೋದೇ ಚಿಂತೆಯಾಗಿದೆ

■ ಶೇಖರಯ್ಯ ಟಿ. ಎಚ್. ಎಂ., ಗೆದ್ದಲಗಟ್ಟೆ.



ಸನ್ನಿವೇಶ 1.

ಅದು ಹೇಳಿಕೇಳಿ ರಾಷ್ಟ್ರೀಯ ಹೆದ್ದಾರಿ. ಸಾಕಷ್ಟು ವಾಹನಗಳು ಶರವೇಗದಲ್ಲಿ ಮುನ್ನುಗ್ಗುತ್ತಿರುತ್ತವೆ. ಅಂತಹ ಅಪಾಯಕಾರಿ ಜಾಗದಲ್ಲಿ ಯುವತಿಯೊಬ್ಬಳು ಹಾಡುಗಳಿಗೆ ನೃತ್ಯ ಮಾಡುತ್ತಾ ರೀಲ್ಸ್ ಮಾಡುತ್ತಿದ್ದಾಳೆ. ಅದನ್ನು ಪೋಷಕರು ನೋಡುತ್ತಾ ನಿಂತಿದ್ದಾರೆ.

ಸನ್ನಿವೇಶ 2.

ರಭಸವಾಗಿ ಹರಿಯುತ್ತಿರುವ ಕ್ಯಾನಲ್ ನೀರು. ಆ ನೀರಿಗೆ ದೂರದಿಂದ ಓಡಿ ಬಂದು ಧುಮುಕುತ್ತಿರುವ ಯುವಕ. ಇದನ್ನು ಶಿಳ್ಳೆ-ಕೇಕೆ ಹಾಕುತ್ತ ವಿಡಿಯೋ ಮಾಡುತ್ತಿರುವ ಸ್ನೇಹಿತರು.

ಈ ಎರಡೂ ವಿಡಿಯೋಗಳನ್ನು ಮಾಡುತ್ತಿರುವುದು ರೀಲ್ಸ್ ಗಾಗಿ. ಅಂದರೆ ತಮ್ಮ ಪ್ರಾಣಕ್ಕೆ ಕುತ್ತಾದರೂ ಸರಿ. ತಮಗೆ ಲೈಕ್ ಗಳು ಬೇಕು. ಜನಪ್ರಿಯತೆ ಬೇಕು ಎಂಬ ಮರಳುತನಕ್ಕೆ ಒಳಗಾಗಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಎಷ್ಟೋ ಸಂದರ್ಭದಲ್ಲಿ ರೀಲ್ಸ್ ಮಾಡುವಾಗ ಪ್ರಾಣವನ್ನು ಕಳೆದುಕೊಂಡ, ಕೈ ಕಾಲುಗಳನ್ನು ಮುರಿದುಕೊಂಡ ಉದಾಹರಣೆಗಳು ಇವೆ. ಹೀಗಾದಾಗ ಮತ್ತೆ ಸಂಕಟಕ್ಕೆ ಬೀಳುವವರು ನಿಮ್ಮನ್ನು ಹೆತ್ತು-ಹೊತ್ತವರು.ಈ ಬಗೆಗೆ ಗಂಭೀರವಾಗಿ ಯೋಚಿಸಿ.

"ಮಾನವ ಜನ್ಮ ದೊಡ್ಡದೋ ಹುಚ್ಚಪ್ಪಗಳಿರಾ ಅದ ಹಾನಿ ಮಾಡಿಕೊಳ್ಳಲುಬೇಡಿ" ಎಂಬ ದಾಸರ ವಾಣಿಯು ಮನುಷ್ಯ ಜನ್ಮವನ್ನು ಅತ್ಯಂತ ಜತನದಿಂದ ಕಾಪಾಡಿಕೊಳ್ಳಬೇಕೆಂಬ ಸಂದೇಶವನ್ನು ಸಾರುತ್ತದೆ. ಹೀಗಾಗಿ ಮನುಷ್ಯ ಜನ್ಮವನ್ನು



ಅನಗತ್ಯವಾಗಿ ಹಾಳು ಮಾಡಿಕೊಳ್ಳುತ್ತಿರುವ ಯುವ ಪೀಳಿಗೆ ಎಚ್ಚೆತ್ತುಕೊಳ್ಳಬೇಕಿದೆ.

ಮೊನ್ನೆ ಸ್ನೇಹಿತರೊಬ್ಬರ ಮನೆಗೆ ತೆರಳಿದ್ದೆ.ದಂಪತಿಗಳ ಜೊತೆ ಮಾತನಾಡುತ್ತಾ ಕುಳಿತಿದ್ದಾಗ,"ಶಾಲಾ-ಕಾಲೇಜು ಬಾಗಿಲು ಯಾವಾಗ ತೆಗೆಯುತ್ತೋ, ನಮಗಂತೂ ಸಾಕು ಸಾಕಾಗಿ ಹೋಗಿದೆ" ಅಂದ್ರು. "ಯಾಕ್ರೀ ಏನಾಯ್ತು" ಅಂದೆ."ಅಯ್ಯೋ ಏನಂತ ಹೇಳೋದು ಬಿಡಿ ಸರ್. ನಮ್ಮನೆಯಲ್ಲಿನ ಹುಡುಗರು ಬರೆ ಮೊಬೈಲ್ನಲ್ಲಿ ರೀಲ್ಸ್-ಗೀಲ್ಸ್ ಅಂತ ನೋಡ್ತಾನೆ ಇರ್ತವೆ. ಅದನ್ನ ಕಸಿದುಕೊಂಡರೆ ಕಾರ್ಟೂನ್-ಗೀರ್ಟೂನ್ ಅಂತ ಟಿವಿ ಹಚ್ಚಿಕೊಳ್ಳುತ್ತವೆ. ನಮಗಂತೂ ಇದನ್ನ ಹೆಂಗಪ್ಪ ಬಿಡಿಸೋದು ಅನ್ನೋದೇ ಚಿಂತೆಯಾಗಿದೆ" ಅಂದ್ರು.

ಆತ್ಮೀಯರೇ ಯೌವ್ವನಾವಸ್ಥೆಯು ಸಾಧನೆಗೆ ಅತ್ಯಂತ ಪಕ್ವ ವಯಸ್ಸು.ಈ ಸಮಯದಲ್ಲಿ ನಿರ್ದಿಷ್ಟ ಗುರಿಯೊಂದಿಗೆ ಸತತ ಯತ್ನ ಮಾಡಿದರೆ ಜೀವನದಲ್ಲಿ ಅಗಾಧವಾದದ್ದನ್ನು ಸಾಧಿಸಬಹುದು. ಅದನ್ನು ಬಿಟ್ಟು ಮೊಬೈಲ್ ಮಾಯೆಲ್ಲಿ ಮುಳುಗಿದರೆ ಬಾಳು ಹಾಳಾಗುವುದು ಖಂಡಿತ. ನಿಮ್ಮ ಸಾಧನೆಗೆ ನೀವೇ ದಾರಿ ದೀಪಗಳಾಗಬೇಕಿದೆ. ನೀವು ಹಾಳಾದರೆ ಖಂಡಿತ ನೋಡಿ ನಗುವವರೇ ಜಾಸ್ತಿ. ಹೀಯಾಳಿಸುವವರೇ ಜಾಸ್ತಿ. ಹಾಗಾಗಿ ರೀಲ್ಸ್ ಗಳಲ್ಲಿ ಏನೂ ಇಲ್ಲ. ರಿಯಲ್ ಆಗಿ ಬದುಕುವುದನ್ನು ಕಲಿಯಿರಿ. ಶ್ರದ್ಧೆ ಮತ್ತು ನಿಷ್ಠೆಯಿಂದ ಸಾಧನೆ ಕಡೆ ನಿಮ್ಮನ್ನು ತೊಡಗಿಸಿಕೊಳ್ಳಿ.

**ನಿಮ್ಮ ವಿರಾಮ ಕಾಲವನ್ನು ನೀವು ಹೀಗೆ ಕಳೆಯಬಹುದಲ್ವಾ:**

1. ಅಪ್ಪ ಅಮ್ಮಂದಿರ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುವ ಮೂಲಕ.
2. ಒಂದೊಳ್ಳೆ ಪುಸ್ತಕವನ್ನು ಓದುವ ಮೂಲಕ.
3. ಮನೆಯ ಕೈತೋಟದಲ್ಲಿರುವ ಗಿಡ ಮರ ಬಳ್ಳಿಗಳಿಗೆ ನೀರುಣಿಸುವ,ಅವುಗಳನ್ನು ಜೋಪಾನ ಮಾಡುವ ಮೂಲಕ.
4. ಮನೆ ಮಂದಿಯೆಲ್ಲ ಸೇರಿ ಕತೆ, ಹಾಡು, ರೀತಿಯ ಸಾಮೂಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ.
5. ಪೋಷಕರೆ ಅಗತ್ಯವಿದ್ದರೆಷ್ಟೇ ಮೊಬೈಲ್ ಬಳಸಿ. ಹೆಚ್ಚಿನ ಸಮಯವನ್ನು ಮಕ್ಕಳೊಂದಿಗೆ ಕಳೆಯುವ ಮೂಲಕ.
6. ಚಿತ್ರಕಲೆ, ಕ್ರಾಫ್ಟ್, ಮಣ್ಣಿನ ಮಾದರಿಗಳನ್ನು ತಯಾರಿಸುವ ಮೂಲಕ.
7. ತಮ್ಮ ಓಣಿಯ ಮಕ್ಕಳೆಲ್ಲ ಸೇರಿ ಅಪಾಯಕಾರಿಯಲ್ಲದ ಆಟೋಟಗಳಲ್ಲಿ ಪಾಲ್ಗೊಳ್ಳುವ ಮೂಲಕ.
8. ಸಂಗೀತ, ಹಾಡು, ನೃತ್ಯ ಹೀಗೆ ನಿಮ್ಮ ಮನಸ್ಸನ್ನು ಅರಳಿಸುವ ಯಾವುದಾದರೊಂದು ಧನಾತ್ಮಕ ಹವ್ಯಾಸಗಳಲ್ಲಿ ತೊಡಗಿಕೊಳ್ಳುವ ಮೂಲಕ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055




# ಮಕ್ಕಳನ್ನು ಕೆಣಕದೆ ಪೋಷಿಸುವುದು ಹೇಗೆ?

ಅದೊಂದು ಪುಟ್ಟ ಸಂಸಾರ. ಗಂಡ ಹೆಂಡತಿ ಕೇವಲ ಎರಡು ಮಕ್ಕಳಿರುವ ಆ ಮನೆಯಲ್ಲಿ ಮಕ್ಕಳ ಹಾರಾಟ, ಪಾಲಕರ ಕಿರುಚಾಟ ಸರ್ವೇಸಾಮಾನ್ಯವಾಗಿತ್ತು. ಕಾರಣಗಳು ಹಲವಾರು.

ತಂದೆ ಮನೆಗೆ ಬಂದೊಡನೆ ಮನೆ ವಾತಾವರಣವನ್ನು ಇನ್ನಿಲ್ಲದಂತೆ ಪರಿಶೀಲಿಸುತ್ತಿದ್ದನು. ಸುಕ್ಕಾಗದ ಬೆಡ್ ಶೀಟ್, ಓರೆ ಕೋರೆಯಾಗದ ಪುಸ್ತಕಗಳು, ಎಲ್ಲೆಂದರಲ್ಲಿ ಬೀಳದೆ ತಮ್ಮ ಸ್ವಸ್ಥಾನವನ್ನು ಅಲಂಕರಿಸಿರುವ ಆಟದ ಸಾಮಾನುಗಳು, ತಲೆ ಬಾಚಿ ಮುಖ ತೊಳೆದು ಮನೆಯುಡುಗೆಯಲ್ಲಿ ಶಿಸ್ತಾಗಿ ಓದಲು ಕುಳಿತ ಮಕ್ಕಳು, ಒಪ್ಪ ಓರಣದಿಂದಿರುವ ಪತ್ನಿ ಹೀಗೆ ಸಂಜೆ ತಾನು ಮನೆಗೆ ಬಂದಾಗ ಇರಬೇಕು ಎಂಬುದು ಆತನ ಬಯಕೆಯಾಗಿತ್ತು. ಆದರೆ ಇಲ್ಲೋ ತದ್ವಿರುದ್ಧ!! ತಾಯಿಯ ಮಾತಿಗೆ ಮಣೆ ಹಾಕದ ಮಕ್ಕಳು, ಎಲ್ಲೆಂದರಲ್ಲಿ ಎಸೆದಿರುವ ಶಾಲೆಯ ಬ್ಯಾಗ್ ಮತ್ತು ಮಕ್ಕಳ ಶೂಗಳು, ಮನೆಯ ಸಾಮಾನುಗಳು ಚೆಲ್ಲಾಪಿಲ್ಲಿ. ಹಾಸಿಗೆಯ ಮೇಲಿರಬೇಕಾದ ದಿಂಬುಗಳು ನೆಲದ ಮೇಲೆ. ಹಾರಾಡುತ್ತಿರುವ ಮಕ್ಕಳನ್ನು ಹಿಡಿಯಲಾಗದೆ ಬಸವಳಿದ ತಾಯಿ. ಅವರನ್ನು ಸುಧಾರಿಸುವಲ್ಲಿ ಆಕೆಯ ಪರಿಸ್ಥಿತಿ ದೇವರೇ ಬಲ್ಲ. ಅದನ್ನು ಕಂಡು ಗಂಡನ ಕೋಪ ತಾರಕಕ್ಕೇರಿ ಆತನ ಕೂಗಾಟ, ಈಗಾಗಲೇ ಬೇಸತ್ತಿರುವ ಪತ್ನಿಯ ಪ್ರತ್ಯುತ್ತರ, ಮಕ್ಕಳಿಗೆ ಒಂದೆರಡು ಏಟು ಕೆಲ ನಿಮಿಷಗಳವರೆಗೆ ಮನೆಯಲ್ಲಿ ನೀರವ ವಾತಾವರಣ ಏರ್ಪಡುತ್ತದೆ. ಆದರೆ ಅಸಹನೆಯ ಗಂಡ ಮನೆಯ ಬಾಲ್ಕನಿಯಲ್ಲಿ ಸಿಗರೇಟ್ ಸೇದುತ್ತಾ ತನ್ನ ಕೋಪವನ್ನು ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸಿದರೆ ಪತ್ನಿ ಅಡುಗೆ ಮನೆಯ ಮೂಲೆಯಲ್ಲಿ ಬಿಕ್ಕಳಿಸುತ್ತಾ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾಳೆ.ಇನ್ನು ಮಕ್ಕಳು ಕೆಲ ನಿಮಿಷಗಳವರೆಗೆ ಒಬ್ಬರ ಮುಖ ಒಬ್ಬರು ನೋಡುತ್ತಾ ಸುಮ್ಮನೆ ಕುಳಿತಿರುತ್ತಾರೆ ಅಷ್ಟೇ ನಂತರ ಮತ್ತದೇ ಹಾರಾಟ..... ಇದು ವಾರದಲ್ಲಿ ಹಲವಾರು ಬಾರಿ ಮರುಕಳಿಸುವ ವಿದ್ಯಮಾನ, ಹಲವಾರು ಮನೆಗಳಲ್ಲಿ ಕಂಡು ಬರುವ ಚಿತ್ರಣ. ಆದರೆ ಇದರ ಪರಿಣಾಮ ಮಾತ್ರ ಭೀಕರ.

ಬಹುತೇಕ ಮನೆಗಳಲ್ಲಿ ಮುಖ್ಯವಾಗಿ ಮನೆಯ ಗಂಡಸರು ಹೆಣ್ಣು ಮಕ್ಕಳನ್ನು ಹೀನಾಯವಾಗಿ ಕಾಣು ತ್ತಾರೆ. ಹೆಂಡತಿ ಮಾಡುವ ಪ್ರತಿ ಕೆಲಸವನ್ನು ಹೀಗಳೆಯುತ್ತಾ ಆಕೆ ಯನ್ನು ನಿಕೃಷ್ಟವಾಗಿ ಕಾಣು ತ್ತಾರೆ. ಇದನ್ನು ನೋಡುತ್ತಾ ಬೆಳೆಯುವ ಮಕ್ಕಳ ಮನಸ್ಸಿನ ಆಳದಲ್ಲಿ ಹೀಗೆ ಮಾಡುವುದು ತಪ್ಪಲ್ಲ ಎಂಬ ಭಾವ ಬೇರೂರಿ ಮುಂದೆ ಅವರು ಕೂಡ ತಾಯಿಯನ್ನು ಆಕೆ ತಮ್ಮೆಲ್ಲ ಕೆಲಸ ಕಾರ್ಯ ಗಳನ್ನು ಮಾಡುತ್ತಾ ತಮ್ಮನ್ನು ಪೋಷಿಸುತ್ತಿದ್ದರೂ ಕೂಡ ಕೇವಲವಾಗಿ ಭಾವಿಸುತ್ತಾ ನಡೆದುಕೊಳ್ಳುತ್ತಾರೆ. ಅಂತಹ ಸಮಯದಲ್ಲಿ ತಾಳ್ಮೆಗೆಡುವ ಹೆಣ್ಣುಮಗಳು ಕೊಂಚ ಕೂಗಾಡಿ, ಇನ್ನೂ ಹೆಚ್ಚು ಸಿಟ್ಟಿದ್ದರೆ ಮಕ್ಕಳ ಮೇಲೆ ಒಂದೆರಡು ಏಟು ಹಾಕಿ ಮಕ್ಕಳು ಅಳುವುದನ್ನು ನೋಡಿ ತಾನು ಅಳುತ್ತಾ ಅಯ್ಯೋ ನನ್ನ ಹಣೆಬರಹವೇ ಇಷ್ಟು ಎಂದು ನೊಂದುಕೊಳ್ಳುತ್ತಾಳೆ. ಇನ್ನು ಮನೆಯಲ್ಲಿ ಹಿರಿಯರಿದ್ದರಂತೂ ಮಗನ ತಪ್ಪನ್ನು ತಿದ್ದಲಾಗದೆ, ಸೊಸೆಗೆ ಸಾಂತ್ವನ ಹೇಳದೆ... ಮಕ್ಕಳೆಂದರೆ ಹೀಗೆಯೇ ಸ್ವಲ್ಪ ಸಹಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಇದು ಗಾಯದ ಮೇಲೆ ಉಪ್ಪು ಸುರಿದಂತೆ ಹೆಣ್ಣು ಮಕ್ಕಳ ಪಾಲಿಗೆ ತೋರಿದರೆ ಆಶ್ಚರ್ಯವಿಲ್ಲ ಅಲ್ಲವೇ!?

ನಾವು ಬಯಸಿ ಬಯಸಿ ಪಡೆದ ಮಕ್ಕಳು ನಮ್ಮ ಮುಂದೆ ಬೃಹದಾಕಾರದ ಸಮಸ್ಯೆಯಾಗಿ ನಿಂತಾಗ ಏನು ಮಾಡಬೇಕು?? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ ಉತ್ತರ ಬಲು ಸರಳ ಆದರೆ ಪಾಲನೆ ಬಹಳ ಮುಖ್ಯ.



ಮನೆಯ ವಾತಾವರಣ ಕೆಡದಿರಲು ಮಕ್ಕಳನ್ನು ಕೆಣಕದೆ ಹೇಗೆ ಬೆಳೆಸಬೇಕು ಎಂಬುದನ್ನು ಕೊಂಚ ಅರಿಯೋಣ.

ಮೊತ್ತಮೊದಲನೆಯದಾಗಿ ಪಾಲಕರು ಮಕ್ಕಳ ಮುಂದೆ ಯಾವುದೇ ರೀತಿಯ ಮನಸ್ತಾಪಕ್ಕೆ ಎಡೆ ಮಾಡಿಕೊಡ ಬಾರದು. ಪಾಲಕರ ನಡುವಿನ ಭಿನ್ನಾಭಿಪ್ರಾಯಗಳು ಮುಚ್ಚಿದ ಕೋಣೆಯ ಒಳಗೆ ಬಗೆಹರಿಯಬೇಕೆ ಹೊರತು ಮಕ್ಕಳ ಮುಂದೆ ಬಹಿರಂಗವಾಗಿ ಅಲ್ಲ. ಮಕ್ಕಳ ಮುಂದೆ ಪಾಲಕರ ನಿರ್ಧಾರ ಒಂದೇ ಆಗಿರಬೇಕು ಈ ನಿಟ್ಟಿನಲ್ಲಿ ಪಾಲಕರು ಯಾವತ್ತಿಗೂ ನಮ್ಮಿಬ್ಬರ ಅಭಿಪ್ರಾಯ ಒಂದೇ ಎಂಬುದನ್ನು ಮಕ್ಕಳಿಗೆ ಮನವರಿಕೆ ಯಾಗುವಂತೆ ನಡೆದುಕೊಳ್ಳಬೇಕು.

ಅಪ್ಪ ಅಮ್ಮನ ಅಭಿಪ್ರಾಯಗಳಲ್ಲಿ ಭಿನ್ನತೆ ಇದ್ದಾಗ ಮಕ್ಕಳು ತಮಗೆ ಅನುಕೂಲವಾಗುವ ಅಭಿಪ್ರಾಯದ ವರೊಡನೆ ಒಂದಾಗಿ ಇನ್ನೊಬ್ಬ ರನ್ನು ದೂಷಿಸುವಲ್ಲಿ ಅವರ ಜೊತೆಗೂಡುತ್ತಾರೆ.

ಮಕ್ಕಳ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವಾಗ ಅಪ್ಪ-ಅಮ್ಮನ ಮಾತುಗಳು ಒಂದೇ ಆಗಿದ್ದರೆ ಮಕ್ಕಳು ಅನಿವಾರ್ಯವಾಗಿ ಪಾಲಕರ ಮಾತಿಗೆ ಒಡಂಬಡ ಬೇಕಾಗುತ್ತದೆ.

ಆದಷ್ಟು ಮಕ್ಕಳು ಮುಕ್ತವಾಗಿ ತಮ್ಮೊಂದಿಗೆ ಮಾತನಾಡುವಂತೆ ಪ್ರೋತ್ಸಾಹಿಸಿ. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ಬೆಳಸಿಕೊಳ್ಳಲಿ ಮತ್ತು ಧೈರ್ಯದಿಂದ ತಮ್ಮನ್ನು ತಾವು ವ್ಯಕ್ತಪಡಿಸಿಕೊಳ್ಳಲಿ. ಆಗ ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು ಅವರ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಮಾಡಿಕೊಡಿ. ನಮ್ಮ ಮಕ್ಕಳು ನಮ್ಮ ಮುಂದೆ ಮಾತನಾಡದೆ ಇದ್ದರೆ ಮುಂದೆ ಬೇರಾರ ಮುಂದೆಯೂ ಮಾತನಾಡಲಾರದು ಎಂಬ ಅರಿವು ನಮಗಿರಬೇಕು.

ಮಕ್ಕಳ ತಪ್ಪುಗಳಿಗಾಗಿ ಅವರನ್ನು ಹೀಗಳೆಯದೇ, ಸಮಾಧಾನವಾಗಿ ತಿಳಿಹೇಳಿ. ಪದೇ ಪದೇ ಅವರ ತಪ್ಪುಗಳನ್ನು ಎತ್ತಿ ತೋರಿಸಿ ಹೀಯಾಳಿಸದಿರಿ.

ಹೀಯಾಳಿಕೆ ಮಕ್ಕಳ ಮನಸ್ಸನ್ನು ಘಾಸಿಗೊಳಿಸುತ್ತದೆ. ಮಕ್ಕಳು ಮಾಡಿರುವ ಒಂದೆರಡು ಒಳ್ಳೆಯ ಕೆಲಸಗಳನ್ನು ಮುಕ್ತ ಮನಸ್ಸಿನಿಂದ ಪ್ರಶಂಸಿಸಿ ನಂತರ ನಯವಾಗಿ ಅವರ ತಪ್ಪನ್ನು ಎತ್ತಿ ತೋರಿಸಿದರೆ ಅವರಿಗೆ ಬೇಸರವಾಗುವುದಿಲ್ಲ ಎಂಬ ಸತ್ಯದ ಅರಿವನ್ನು ಹೊಂದಿದ್ದರೆ ಒಳ್ಳೆಯದು.ಪ್ರಶಂಸೆ ಮಾಡು ವುದರಿಂದ ಸೊಕ್ಕಿಗೆ ಬರುತ್ತಾರೆ ಎಂಬುದು ತಪ್ಪು.


ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ಮಕ್ಕಳಿಗೆ ಹೀಗೆಯೇ ಮಾಡಬೇಕು, ಹೀಗೆಯೇ ಇರಬೇಕು ಎಂಬ ಒತ್ತಾಯ ಮತ್ತು ಆಜ್ಞಾ ಭಾವ ಸಲ್ಲದು. ಮಕ್ಕಳು ಆಟವಾಡುವ ಕೀಲುಗೊಂಬೆಗಳಲ್ಲ... ನಮಗೆ ಬೇಕಾದಂತೆ ಕೀಲಿ ಕೊಟ್ಟು ಕುಣಿಸಲು. ಒತ್ತಾಯದ ಕಲಿಕೆಯಲ್ಲಿ ಒಂದು ಹಂತದವರೆಗೆ ಅವರು ನಮ್ಮನ್ನು ಪಾಲಿಸುತ್ತಾರೆ ನಂತರ ನಮ್ಮ ಮಾತುಗಳನ್ನು ಅವಗಣಿಸುತ್ತಾರೆ. ಆದ್ದರಿಂದ ಮಕ್ಕಳಿಗೆ ಹೆಚ್ಚೆಚ್ಚು ಅವಕಾಶಗಳ ಸಾಧ್ಯತೆಗಳನ್ನು ತೋರಿಸಿ ಅದರಲ್ಲಿ ಯಾವುದು ಉಪಯುಕ್ತವೋ ಅದನ್ನು ಆಯ್ದುಕೊಳ್ಳಿ ಎಂದು ಸೂಚಿಸಿ. ಅವರ ಆಯ್ಕೆಯ ಉಚಿತ ಮತ್ತು ಅನುಚಿತತೆಗಳ ಕುರಿತು ತಿಳುವಳಿಕೆ ಕೊಡಿ ಆದರೆ ನಿರ್ಧಾರವನ್ನು ಮಾತ್ರ ಅವರಿಗೆ ಬಿಡಿ.

ಮಕ್ಕಳು ಚಿಕ್ಕವರಿದ್ದಾಗ ಅವರ ಎಲ್ಲಾ ಕೆಲಸಗಳನ್ನು ನೀವೇ ಮಾಡಿಕೊಡುತ್ತಿದ್ದಿರಿ ಎಂಬುದೇನೋ ಸರಿ, ಆದರೆ ನಿಧಾನವಾಗಿ ಅವರವರ ಕೆಲಸಗಳನ್ನು ಅವರೇ ಮಾಡಿಕೊಳ್ಳಲು ಪ್ರೋತ್ಸಾಹಿಸಿ. ಅವರ ಸಣ್ಣ ಪುಟ್ಟ ಸ್ವಾವಲಂಬಿತನವನ್ನು ಮುಕ್ತವಾಗಿ ಪ್ರಶಂಸಿಸಿ, ಆದರೆ ಅದರಲ್ಲಿ ತಪ್ಪುಗಳಿದ್ದರೆ ಮತ್ತೆ ನಯವಾಗಿ ತಿದ್ದಿ ಹೇಳಿ. ನಿಧಾನವಾಗಿ ಅವರಿಗೆ ಆಯ್ಕೆ, ಸೌಲಭ್ಯ, ಕರ್ತವ್ಯ, ಜವಾಬ್ದಾರಿ ಮತ್ತು ಮನೆಯ ಪರಿಸ್ಥಿತಿಗಳ ಅರಿವನ್ನು ಮೂಡಿಸಿ.ಪಾಲಕರ ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ಅರಿಯದ ಮಕ್ಕಳು ತಮ್ಮ ಸುತ್ತಣ ಜಗತ್ತಿನ ವಸ್ತುಗಳನ್ನು ಬಯಸಿ ಅದನ್ನು ಪಡೆದುಕೊಳ್ಳಲು ಸಾಧ್ಯವಾಗದೆ ಹೋದಾಗ ನಿರಾಶರಾಗಬಹುದು.ನಮ್ಮ ಮಿತಿಗಳನ್ನು ಅರಿತುಕೊಳ್ಳುವ ಅವಕಾಶಗಳನ್ನು ಮಕ್ಕಳು ಬಳಸಿಕೊಳ್ಳಲಿ. ತಮ್ಮ ಪಾಲಕರ ಶ್ರಮದ ಸಾರ್ಥಕತೆಯ ಅರಿವನ್ನು ಅವರು ಹೊಂದಿರಲಿ.

**ಮಕ್ಕಳನ್ನು ಸಕಾರಾತ್ಮಕವಾಗಿ ಬೆಳೆಸಿ.**
**ಅಯ್ಯೋ ನೀನು ಓದಿ ಉದ್ದಾರ ಆದ ಹಾಗೆ!**
**ನಿನ್ ಹಣೆ ಬರಹನೆ ಎಷ್ಟು!**
**ಅವರನ್ನು ನೋಡಿ ಕಲಿ!**
**ಆ ಮನೆ ಮಗು ಅಷ್ಟ್ ಮಾರ್ಕ್ಸ್ ತಗೊಂಡೈತಿ ನಿನಗೇನಾಗಿದೆ ದಾಡಿ!!**

ಎಂಬ ನಕಾರಾತ್ಮಕ ಮಾತುಗಳಿಂದ ಮಕ್ಕಳ ಮನಸ್ಸು ಮುದುಡುತ್ತದೆ. ಬೇರೆಯವರೊಂದಿಗೆ ಯಾವತ್ತೂ ಮಕ್ಕಳನ್ನು ಹೋಲಿಸಬಾರದು. ಯಾವ ರೀತಿ ನಮ್ಮ ಕೈಯ ಐದು ಬೆರಳುಗಳು ಸಮನಾಗಿಲ್ಲವೋ ಅಂತೇಯೇ ಈ ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ಮಗುವು ವಿಭಿನ್ನ ಮತ್ತು ವಿಶಿಷ್ಟ. ಮಗುವಿನ ಆ ವೈಶಿಷ್ಟತೆಯನ್ನು ಗುರುತಿಸಿ ಕಲಿಕೆಯ ಆಸಕ್ತಿಯನ್ನು ಪ್ರೋತ್ಸಾಹಿಸಿ. ಅವರು ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಮುಂದುವರೆಯಲು ಅವಕಾಶ ಮಾಡಿಕೊಡಿ. ನೀವು ಮಗುವನ್ನು ಪ್ರೋತ್ಸಾಹಿಸದಿದ್ದರೂ ಪರವಾಗಿಲ್ಲ ನಕಾರಾತ್ಮಕವಾಗಿ ಮಾತನಾಡಿದಾಗ ಮಗು ಮೊದಮೊದಲು ನೊಂದುಕೊಳ್ಳುತ್ತದೆ, ನಂತರ ನಾನು ಹೇಗಿದ್ದರೂ ಅವರು ಬಯ್ಯುತ್ತಾರೆ ಆದ್ದರಿಂದ ಹೀಗೆ ಇದ್ದುಬಿಡುತ್ತೇನೆ ಎಂಬ ಭಾವ ಮಗುವಿನ ಸುಪ್ತ ಮನಸ್ಸಿನಲ್ಲಿ ಬೇರೂರಿದರೆ ಮಗು ಮೊಂಡುತನಕ್ಕೆ ಬೀಳುತ್ತದೆ. ಮುಂದೆಂದೂ ಮಗು ಪಾಲಕರ ಮಾತನ್ನು ಗೌರವಿಸುವುದಿಲ್ಲ ತನ್ನ ಮೂಗಿನ ನೇರಕ್ಕೆ ನಡೆದುಕೊಳ್ಳುತ್ತದೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬ ಉಕ್ತಿಯಂತೆ ಚಿಕ್ಕವರಿದ್ದಾಗ ಪ್ರೀತಿ ವಿಶ್ವಾಸದಿಂದ ತಿಳಿ ಹೇಳದೆ ಕೇವಲ ಅಸಹನೆ, ಅಸಡ್ಡೆ ಮತ್ತು ನಿಂದನೆಗಳನ್ನು ಮಾಡುವ ಮೂಲಕ ಮಕ್ಕಳನ್ನು ಬೆಳೆಸಿದರೆ ಆ ಮಕ್ಕಳು ವೈಪರೀತ್ಯಕ್ಕೆ ಒಳಗಾಗಿ ಸಮಾಜಘಾತಕ ಶಕ್ತಿಗಳಾಗಿಯೂ ಬೆಳೆಯಬಹುದು ಇಲ್ಲವೇ ಅತ್ಯಂತ ಕೀಳರಿಮೆಯಿಂದಲೂ ಬಳಲಬಹುದು. ಮಗುವಿನ ಮಾನಸಿಕ ಆರೋಗ್ಯಕ್ಕೆ ಈ ಎರಡು ಹಂತಗಳೂ ಹಾನಿಕಾರಕವೇ.

ಯಾವ ರೀತಿ ಪುಟ್ಟ ಸಸಿಯೊಂದಕ್ಕೆ ಸೂಕ್ತ ರೀತಿಯ ನೀರು, ಗೊಬ್ಬರ ಮತ್ತು ಆರೈಕೆಯ ಅವಶ್ಯಕತೆ ಇರುತ್ತದೆಯೋ ಅಂತೆಯೇ ಮಗುವಿನ ಬೆಳವಣಿಗೆಗೆ ಪ್ರೀತಿ, ಹದ ಬೆರೆತ ಶಿಸ್ತು, ಒಳ್ಳೆಯ ಕ್ರಮಬದ್ಧ ಶಿಕ್ಷಣ ಅವಶ್ಯಕವಾಗಿರುತ್ತದೆ. ಆದ್ದರಿಂದ ಪಾಲಕರು ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಒತ್ತಟ್ಟಿಗೆ ಇಟ್ಟು ಮಗುವಿನ ಬೆಳವಣಿಗೆಗೆ ಸಂಘಟಿತರಾಗಿ ಒಳ್ಳೆಯ ನಾಗರಿಕರನ್ನು ಈ ಸಮಾಜಕ್ಕೆ ಕಾಣಿಕೆಯಾಗಿ ನೀಡುವ ನಿಟ್ಟಿನಲ್ಲಿ ನಿಮ್ಮ ಗುರುತರ ಜವಾಬ್ದಾರಿಯನ್ನು ನಿರ್ವಹಿಸಿ.

ಮೈಕ್ರೋ ನ್ಯೂಸ್

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

10 ದಿನಗಳ ಜೂಟ್ ಬ್ಯಾಗ್ ತಯಾರಿಕೆ ತರಬೇತಿ, 30 ದಿನಗಳ ಮೊಬೈಲ್ ರಿಪೇರ್ & ಸರ್ವಿಸ್ ತರಬೇತಿ, ಮೋಟಾರ್ ರೀವೈಂಡಿಂಗ್ & ಪಂಪ್ ಸೆಟ್ ರಿಪೇರ್, ಮಹಿಳಾ ಹೊಲಿಗೆ ತರಬೇತಿ ಹಾಗೂ ಬ್ಯೂಟಿ ಪಾರ್ಲರ್ ತರಬೇತಿಗಳಿಗಾಗಿ ಮೇ.12 ರಂದು ಸಂದರ್ಶನ ನಡೆಯಲಿದ್ದು, ಮೇ 14 ರಿಂದ ತರಬೇತಿ ಪ್ರಾರಂಭವಾಗಲಿವೆ. ಅರ್ಜಿ ಸಲ್ಲಿಸಲು ಅರ್ಜಿದಾರರು 18 ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಪಾಸ್ ಆಗಿರಬೇಕು. ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲಿಚ್ಛಿಸುವ ಆಸಕ್ತರು ತಮ್ಮ ಆಧಾರ ಕಾರ್ಡ ಜೆರಾಕ್ಸ್ ಪ್ರತಿ, ರೇಶನ್ ಕಾರ್ಡ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಸೈಜ್ ಮೂರು ಫೋಟೋ, ಮಾರ್ಕ್ಸ‌ಕಾರ್ಡ ಜೆರಾಕ್ಸ್ ಪ್ರತಿಯೊಂದಿಗೆ ಅರ್ಜಿಯನ್ನು ನಿರ್ದೇಶಕರು, ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ದೂ.ಸಂ: 08539 231038, ಮೊ.ಸಂ: 9483618178, 7259073827, 9538096796 & 9481085217ಗೆ ಸಂಪರ್ಕಿಸಬಹುದಾಗಿದೆ.

ಸ್ವಯಂ ಉದ್ಯೋಗ ತರಬೇತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಕೊಪ್ಪಳ ಎಸ್‌ಬಿಐ ಆರ್‌ಸಿಟಿ ನಿರ್ದೇಶಕರು ತಿಳಿಸಿದ್ದಾರೆ.

### ಗ್ರಾಪಂ ಮಹಿಳಾ ಗ್ರಾಮಸಭೆಯಲ್ಲಿ ಪದ್ಮಶ್ರೀ ಭೀಮವ್ವ ಶಿಳ್ಳಿಕ್ಯಾತರ ಭಾಗಿ

## ಮಹಿಳಾ ಸಬಲೀಕರಣದಿಂದ ದೇಶ ಅಭಿವೃದ್ಧಿ



**ಹಂಪಿ ಟೈಮ್ಸ್ ಕೊಪ್ಪಳ**
ಹಗಲಿರುಳು ತನ್ನ ಕುಟುಂಬದ ಏಳ್ಗೆಗೆ ಶ್ರಮಿಸುತ್ತಿರುವ ಮಹಿಳೆಯ ಶ್ರಮ ಶ್ಲಾಘನೀಯ ವಾಗಿದೆಂದು ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಪ್ರಕಾಶ ವಿ. ಹೇಳಿದರು.

ಅವರು ಇತ್ತೀಚೆಗೆ ಗಿಣಿಗೇರಾದಲ್ಲಿ ಗ್ರಾಮ ಪಂಚಾಯತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ಗ್ರಾಮಸಭೆಯಲ್ಲಿ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಭಾಗವಹಿಸಿ ಮಾತನಾಡಿದರು. ಇಂದಿನ ಯುಗ ಸ್ಪರ್ಧಾತ್ಮಕ ಯುಗವಾಗಿರುವದರಿಂದ ಮಹಿಳೆಯರು ಎಲ್ಲಾ ರಂಗದಲ್ಲಿ ಭಾಗವಹಿಸಿ ಸಬಲೀಕರಣವಾಗುತ್ತಿರುವದರಿಂದ ದೇಶ ಅಭಿವೃದ್ಧಿಯತ್ತ ಮುನ್ನಡೆಯಲು ಸಾಧ್ಯವಾಗಿದೆ. ಭಾರತ ಸಂವಿಧಾನವು ಕೂಡಾ ಮಹಿಳೆಯರಿಗೆ ಸಮಾನ ಮೀಸಲಾತಿ ಕಲ್ಪಿಸಿರುವದರಿಂದ ಅವರ ಹಕ್ಕುಗಳನ್ನು ಎತ್ತಿ ಹಿಡಿದಿದೆ. ದೇಶ ಅಭಿವೃದ್ಧಿ ಹೊಂದಿದೆ ಎಂದು ಹೇಳಬೇಕಾದರೆ ಅಲ್ಲಿನ ಮಹಿಳೆಯರಿಗೆ ನೀಡಿರುವ ಹಕ್ಕುಗಳ ಆಧಾರದ ಮೇಲೆ ನಿರ್ಧಾರಿತವಾಗಿರುತ್ತದೆ. ಮಹಿಳೆಯರು ಕುಟುಂಬದ ನೊಗವನ್ನು ಹೊತ್ತು ಜವಾಬ್ದಾರಿಯಿಂದ ಹಿಂದೆ ಸರಿಯದೇ ಮುನ್ನುಗ್ಗಿ ತನ್ನ ಶಕ್ತಿ ಮೀರಿ ತನ್ನ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಮಹಿಳೆ ಕೇವಲ ಕುಟುಂಬಕ್ಕೆ ಸೀಮಿತವಾಗಿರದೇ ತಾನು ಕೂಡಾ ಸಬಲೇ ಎನ್ನುವದನ್ನು ಕೆಲಸದ ಮೂಲಕ ತೋರ್ಪಡಿಸುತ್ತಿದ್ದಾಳೆ ಎಂದರು.

ಕೊಪ್ಪಳ ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಲಾಲನೆ-ಪಾಲನೆ, ಶಿಕ್ಷಣ, ಕುಟುಂಬ ನಿರ್ವಹಣೆ, ಕಛೇರಿ ಕೆಲಸ, ಶಿಕ್ಷಣ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಣೆ ಇತ್ಯಾದಿಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸಮಾಜ ನೀಡಿದ ಗುರುತರ ಜವಾಬ್ದಾರಿಯನ್ನು ಸುಗಮವಾಗಿ ಸಾಗಿಸುತ್ತಿದ್ದಾರೆ. ಮಹಿಳೆಯರಿಗೆ ಉತ್ತಮ ವಾತಾವರಣ ಕಲ್ಪಿಸಲು ಎಲ್ಲರು ಶ್ರಮಿಸಬೇಕೆಂದು ಕರೆ ನೀಡಿದರು.

ತೊಗಲುಗೊಂಬೆಯಾಟದ ಖ್ಯಾತಿಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಭೀಮಮ್ಮಗೆ ಗೌರವ ಸನ್ಮಾನ: ಬಹು ವರ್ಷಗಳಿಂದ ತೊಗಲುಗೊಂಬೆ ಆಟವನ್ನು ದೇಶ-ವಿದೇಶಗಳಲ್ಲಿ ಪ್ರದರ್ಶಿಸಿ ವಿಖ್ಯಾತಿ ಹೊಂದಿರುವ ಮೋರನಾಳ ಗ್ರಾಮದ ಭೀಮಮ್ಮ ಇವರಿಗೆ ಇತ್ತೀಚಿಗೆ ರಾಷ್ಟ್ರಪತಿಗಳಿಂದ ಪದ್ಮಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ ಭೀಮವ್ವ ಶಿಳ್ಳಿಕ್ಯಾತರ ಅವರು ಮಹಿಳಾ ಗ್ರಾಮಸಭೆಯಲ್ಲಿ ಭಾಗವಹಿಸಿದ ಪ್ರಯುಕ್ತ ಗ್ರಾಮ ಪಂಚಾಯತಿಯಿಂದ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಂಜಿತಾ ಯಮನೂರಪ್ಪ ಚವ್ಹಾಣ್, ತಾಲೂಕ ಪಂಚಾಯತಿ ಸಹಾಯಕ ನಿರ್ದೇಶಕ ಮಹೇಶ್, ಪಂಚಾಯತ ಅಭಿವೃದ್ಧಿ ಅಧಿಕಾರಿ ಮಂಜುಳಾ ದೇವಿ ಹೂಗಾರ, ಗ್ರಾಮ ಪಂಚಾಯತಿ ಸದಸ್ಯರಾದ ಮಂಜುನಾಥ ಪಾಟೀಲ್, ಕರಿಯಪ್ಪ ಮೇಟಿ, ಲಕ್ಷ್ಮಣ ಡೊಳ್ಳಿನ, ಶಶಿಕಲಾ ಬಾಬು ಗುಡೆಕರ್, ಮೈಲಾರಪ್ಪ ಕುಡ್ಲಿ, ಸುಮಂಗಲಾ ಶೇಕಪ್ಪ ಇಂದರಗಿ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಮರಿಯಪ್ಪ ಶಿಡ್ಲೆಪ್ಪನವರ, ಮಹಿಳಾ ಮತ್ತು ಮಕ್ಕಳ ರಕ್ಷಣಾ ಘಟಕದ ಸದಸ್ಯರು ಮಹಿಳಾ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಸಂಘದ ಮಹಿಳೆಯರು ಉಪಸ್ಥಿತರಿದ್ದರು.


## ಮೂರು ತಿಂಗಳಿಗೊಮ್ಮೆ ಸ್ವಯಂ ಘೋಷಣೆ ಸಲ್ಲಿಸಲು ಅವಕಾಶ

**ಹಂಪಿ ಟೈಮ್ಸ್ ಕೊಪ್ಪಳ**
ಯುವನಿಧಿ ಫಲಾನುಭವಿಗಳು ಪ್ರತಿ ತಿಂಗಳು ದಾಖಲಿಸುತ್ತಿರುವ ಸ್ವಯಂ ಘೋಷಣೆಯನ್ನು ಇನ್ನೂ ಮುಂದೆ ಮೂರು ತಿಂಗಳಿಗೊಮ್ಮೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

2023 ಅಥವಾ 2024ನೇ ಸಾಲಿನಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮ್ ನಲ್ಲಿ ತೇರ್ಗಡೆಯಾಗಿ, ಇನ್ನೂ ಯುವ ನಿಧಿ ಯೋಜನೆಗೆ ಅರ್ಜಿ ಸಲ್ಲಿಸದೇ ಇರುವ ಅರ್ಹ ನಿರುದ್ಯೋಗಿ ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟ್ಲ್ ವೆಬ್‌ಸೈಟ್ https://sevasindhugs.karnataka.gov.in ಮೂಲಕ ಗ್ರಾಮ್ ಒನ್, ಕರ್ನಾಟಕ ಒನ್ ಅಥವಾ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಯುವ ನಿಧಿ ಯೋಜನೆಗೆ ಅರ್ಜಿ ಸಲ್ಲಿಸಲು ಯಾವುದೆ ಕೊನೆಯ ದಿನಾಂಕ ನಿಗದಿಯಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಯುವನಿಧಿ ಸಹಾಯವಾಣಿ ಸಂಖ್ಯೆ: 18005997154ಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಪ್ರಕಟಣೆ ತಿಳಿಸಿದೆ.






# ಲಾರಿ ಚಾಲಕರಿಗೆ ಒಂದು ತಿಂಗಳು ಉಚಿತ ಸೇವೆ

## ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ । ಎನ್‌ಎಚ್ 50ರ ಪಕ್ಕ ನೂತನ ಹೊಸಪೇಟೆ ಟ್ರಕ್ ಟರ್ಮಿನಲ್ ಉದ್ಘಾಟನೆ ಸರಕು ಸುರಕ್ಷತೆಗೆ ಟ್ರಕ್ ಟರ್ಮಿನಲ್‌ಗಳು ಸಹಕಾರಿ । ಊರೊಳಗೆ ವಾಯುಮಾಲಿನ್ಯ ತಡೆಗಟ್ಟಲು ಸರ್ಕಾರ ಆದ್ಯತೆ





**ಹಂಪಿ ಟೈಮ್ಸ್ ಹೊಸಪೇಟೆ**

ಲಾರಿಗಳಲ್ಲಿ ಬರುವ ಸರಕುಗಳನ್ನು ಸುರಕ್ಷಿತವಾಗಿ ಆಯಾ ಸ್ಥಳಕ್ಕೆ ತಲುಪಿಸಲು, ವಾಹನ ಚಾಲಕರು ವಿಶ್ರಾಂತಿ ಪಡೆಯಲು, ವಾಹನ ದಟ್ಟನೆ ಮತ್ತು ರಸ್ತೆ ಅಪಘಾತಗಳನ್ನು ತಡೆಗಟ್ಟಲು ಟ್ರಕ್ ಟರ್ಮಿನಲ್‌ಗಳು ಅತ್ಯಂತ ಸಹಕಾರಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಹೊಸಪೇಟೆ ಬಳಿಯ ಅಮರಾವತಿಯ ಬಳಿ ಚಿತ್ರದುರ್ಗದಿಂದ ಬಿಜಾಪುರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ 50 ರ ಬಲಭಾಗದಲ್ಲಿ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್‌ನಿಂದ ನೂತನವಾಗಿ ನಿರ್ಮಿಸಿರುವ ಹೊಸಪೇಟೆ ಟ್ರಕ್ ಟರ್ಮಿನಲ್‌ನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು. ನೂತನ ಟ್ರಕ್ ಟರ್ಮಿನಲ್‌ನಲ್ಲಿ ಒಂದು ತಿಂಗಳ ಕಾಲ ಲಾರಿ ಚಾಲಕರಿಗೆ ಉಚಿತ ಸೇವೆ ಒದಗಿಸಲು ಕ್ರಮ ವಹಿಸಲಾಗಿದೆ. ರಾಜ್ಯದಲ್ಲಿ ಬೆಂಗಳೂರು ನಗರದ ಯಶವಂತಪುರ, ದಾಸನಪುರ, ಮೈಸೂರು ನಗರದ ಬಂಡಿಪಾಳ್ಯ ಮತ್ತು ನಾಚನಹಳ್ಳಿ, ಧಾರವಾಡದ ಬೇಲೂರು ಕೈಗಾರಿಕಾ ಪ್ರದೇಶ, ಹೊಸಪೇಟೆಯ ಅಮರಾವತಿ, ಉತ್ತರಕನ್ನಡದ ದಾಂಡೇಲಿ, ಹುಬ್ಬಳಿಯ ಅಂಚಟಗೇರಿ, ಚಾಮರಾಜನಗರದ ಗುಂಡ್ಲುಪೇಟೆ, ರಾಯಚೂರು ಯರಮರಸ್ ಸೇರಿದಂತೆ ಒಟ್ಟು 9 ಟ್ರಕ್ ಟರ್ಮಿನಲ್‌ಗಳ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿದೆ. ಇದರಿಂದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಲಾರಿ ಚಾಲಕರಿಗೆ, ಕ್ಲೀನರ್‌ಗಳಿಗೆ, ಮಾಲೀಕರುಗಳಿಗೆ ನಿರ್ವಹಣೆದಾರರಿಗೆ ತಂಗುದಾಣ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಸರಕುಗಳನ್ನು ಇಳಿಸುವ ಮತ್ತು ಲೋಡಿಂಗ್ ವ್ಯವಸ್ಥೆ, ವಾಹನ ಚಾಲಕರಿಗೆ ಅಗತ್ಯ ಸೌಲಭ್ಯಗಳಾದ ಇಂಧನ ತುಂಬುವಿಕೆ, ವಾಹನ ಸ್ವಚ್ಛತೆ, ವಿಶ್ರಾಂತಿ ಕೊಠಡಿಗಳು, ಕ್ಯಾಂಟೀನ್‌ಗಳು, ಶೌಚಾಲಯ, ವೈದ್ಯಕೀಯ ಸೌಲಭ್ಯ ಒದಗಿಸಲು ಟ್ರಕ್ ಟರ್ಮಿನಲ್ ಸಹಕಾರಿಯಾಗಲಿವೆ. ಇದರಿಂದಾಗಿ ನಗರದೊಳಗೆ ವಾಹನಗಳು ಉಗುಳುವ ಹೊಗೆಯಿಂದ ಉಂಟಾಗುವ ವಾಯುಮಾಲಿನ್ಯ ಕಡಿಮೆ ಮಾಡಲು ಸಾಧ್ಯವಿದೆ. ಇದೀಗ ಉದ್ಘಾಟಿಸಿರುವ ಹೊಸಪೇಟೆಯ ಹೈಟೆಕ್ ಟ್ರಕ್ ಟರ್ಮಿನಲ್ ರಾಜ್ಯದಲ್ಲೇ ಮಾದರಿಯಾಗಲಿದೆ. ಇವುಗಳ ಅಭಿವೃದ್ಧಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಹಿತಾಸಕ್ತಿಯು ಮುಖ್ಯವಾಗಲಿದೆ. ಲಾರಿ ಚಾಲಕರು ಮತ್ತು ಮಾಲೀಕರ ಶ್ರೇಯೋಭಿವೃದ್ಧಿಗೆ ರಾಜ್ಯ ಸರ್ಕಾರ ಆದ್ಯತೆ ನೀಡಿದೆ ಎಂದರು.

ಶಾಸಕ ಹೆಚ್.ಆರ್.ಗವಿಯಪ್ಪ ಮಾತನಾಡಿ, ಈ ಭಾಗದ ಲಾರಿ ಚಾಲಕರ, ಮಾಲೀಕರ ಮೂರ್ನಾಲ್ಕು ದಶಕದ ಬೇಡಿಕೆ ಇಂದು ಸಾಕಾರಗೊಂಡಿದೆ. ಇಂತಹ ಬೃಹತ್ ಟರ್ಮಿನಲ್ ನಿರ್ಮಾಣಕ್ಕೆ ಸಚಿವರ ಮುತುವರ್ಜಿಯೇ ಕಾರಣವಾಗಿದೆ ಎಂದರು.


ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಮಾತನಾಡಿ, ನೂತನ ಟರ್ಮಿನಲ್‌ನಲ್ಲಿ ಸುಮಾರು 350 ಕ್ಕೂ ಹೆಚ್ಚು ಟ್ರಕ್‌ಗಳನ್ನು ನಿಲುಗಡೆ ಮಾಡಬಹುದಾಗಿದೆ. ಸಿಮೆಂಟ್ ಕಾಂಕ್ರಿಟ್ ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸೌಕರ್ಯ, ಹೈಮಾಸ್ಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಚಾಲಕರು ಮತ್ತು ಕ್ಲೀನರ್‌ಗಳಿಗೆ ಶೌಚಾಲಯ, ಸ್ನಾನದಗೃಹ ಸೇರಿದಂತೆ ವಿಶಾಲವಾದ ಡೈನಿಂಗ್ ಹಾಲ್, ಅಡುಗೆ ಮನೆ, ಉಗ್ರಾಣ, 128 ಬೆಡ್‌ಗಳ ಡಾರ್ಮಿಟರಿ ವ್ಯವಸ್ಥೆ ಕಲ್ಪಿಸುವ ಕಟ್ಟಡ ಟರ್ಮಿನಲ್ ಆವರಣದಲ್ಲಿದೆ. ಪೆಟ್ರೋಲ್ ಬಂಕ್ ಮತ್ತು ಸರ್ವೀಸ್ ಸ್ಟೇಷನ್, ವೇಬ್ರಿಡ್ಜ್ ಗೆ ನಿವೇಶನಗಳನ್ನು ಕಾಯ್ದಿರಿಸಲಾಗಿದೆ. ಅಷ್ಟಲ್ಲದೇ 100 ಸಾರಿಗೆ ನಿವೇಶನವನ್ನು ಲಾರಿ ಮಾಲೀಕರು ಮತ್ತು ಏಜೆಂಟ್‌ಗಳಿಗಾಗಿ ನಿರ್ಮಿಸಲಾಗಿದೆ. ಗೋಡೌನ್ ಪ್ಲಾಟ್‌ಗಾಗಿ ಒಟ್ಟು 22 ನಿವೇಶನಗಳ ಸಹಿತ ಸುಂದರ ಹಸಿರು ಪರಿಸರ ಆಕರ್ಷಣೀಯವಾಗಿದೆ ಎಂದರು.

ಈ ವೇಳೆ ರಾಜ್ಯ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ, ಲಾರಿ ಮಾಲೀಕರ ಫೆಡರೇಷನ್ ಅಧ್ಯಕ್ಷರಾದ ನವೀನ್ ರೆಡ್ಡಿ ಮಾತನಾಡಿದರು, ಈ ವೇಳೆ ವಿಧಾನ ಪರಿಷತ್ ಸದಸ್ಯ ರಾಮೋಜಿ, ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ, ಎಸ್ಪಿ ಶ್ರೀಹರಿಬಾಬು, ಸಾರಿಗೆ ಇಲಾಖೆ ಜಂಟಿ ನಿರ್ದೇಶಕ ಸಿದ್ದಪ್ಪ ಪಲ್ಲೇದ್, ಸಾರಿಗೆ ಅಧಿಕಾರಿ ವಸಂತ ಕುಮಾರ್ ಚವ್ಹಾಣ್ ಸೇರಿದಂತೆ ಲಾರಿ ಮಾಲೀಕರಗಳು, ಚಾಲಕರು ಭಾಗವಹಿಸಿದ್ದರು.

---

### ನಿನಗೆ ನೀನೇ ಬೆಳಕು

ಜೀವನ ಅನ್ನೋದು ಸೋಲು ಗೆಲುವಿನ ಆಟ,
ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೆ,
ಸೋತವನಿಗೆ ಗೆಲ್ಲಲೇಬೇಕೆಂಬ ಛಲವಿರುತ್ತೆ.



### ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 05–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.40 ಅಡಿ |
| ಒಳ ಹರಿವು | 827 ಕ್ಯುಸೆಕ್ |
| ಹೊರ ಹರಿವು | 279 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.941 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.89 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಸಾಮರ್ಥ್ಯ | 3.528 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

06–05–2025 – ಮಂಗಳವಾರ

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘ |
| ಯೋಗ | : ಧ್ರುವ |
| ಕರಣ | : ಕೌಳವ |
| ಸೂರ್ಯೋದಯ | : 05:51:46 |
| ಸೂರ್ಯಾಸ್ತ | : 18:55:36 |
| ರಾಹು ಕಾಲ | : 15:40–17:18 |
| ಯಮಘಂಡ ಕಾಲ | : 09:08–10:46 |
| ಗುಳಿಕ ಕಾಲ | : 12:24–14:02 |

## ಮೇ.7 ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಮೇ.7 ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆ ನಡೆಯಲಿವೆ.

ಮೇ.07 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಕೊಟ್ಟೂರು ತಾಲೂಕು ಕಚೇರಿ ಸಭಾಂಗಣದಲ್ಲಿ, ಮೇ.12 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಕೂಡ್ಲಿಗಿ ತಾಲೂಕು ಕಚೇರಿ ಸಭಾಂಗಣ, ಮೇ.20 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ಹರಪನಹಳ್ಳಿ ತಾಲೂಕು ಕಚೇರಿ ಸಭಾಂಗಣದಲ್ಲಿ ಜನಸಂಪರ್ಕ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

---

### ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದ ಈ.ತುಕಾರಾಮ್ ಸೂಚನೆ

# ಮಿಶ್ರಬೆಳೆ ಬೆಳೆಯಲು ರೈತರಿಗೆ ಮಾಹಿತಿ ಒದಗಿಸಿ



**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಐದೂ ತಾಲೂಕುಗಳಲ್ಲಿ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಲು ಮಿಶ್ರ ಬೆಳೆ ಪದ್ಧತಿ ಅಳವಡಿಸಿಕೊಳ್ಳುವ ಕುರಿತು ರೈತರಿಗೆ ವಿಶೇಷ ಕಾರ್ಯಕ್ರಮ ಆಯೋಜಿಸಿ ಮಾಹಿತಿ ಒದಗಿಸಲು ಕೃಷಿ, ತೋಟಗಾರಿಕೆ ಅಧಿಕಾರಿಗಳು ವಿಶೇಷ ಕ್ರಮ ವಹಿಸಬೇಕು ಎಂದು ಸಂಸದ ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷ ಈ.ತುಕಾರಾಮ್ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ವತಿಯಿಂದ ಸಂಡೂರಿನ ನಂದಿಹಳ್ಳಿ ಪಿ.ಜಿ.ಹಳ್ಳಿ ಕೇಂದ್ರದ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ "ದಿಶಾ" ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಮಣ್ಣಿನ ಗುಣವನ್ನಾಧರಿಸಿ ರೈತರು ಬೆಳೆ ತೆಗೆಯಬೇಕು. ವಿವಿಧ ರೀತಿಯ ಸರ್ವ ರೀತಿಯ ಬೆಳೆ ಬೆಳೆಯಲು ಒಂದು ಮಾಸ್ಟರ್ ಪ್ಲಾನ್ ಮಾಡಬೇಕು. ಜಿಲ್ಲೆಯ ರೈತರಿಗೆ ಹೊಸದೊಂದು ಮಾರ್ಗದರ್ಶಿ ಯೋಜನೆ ರೂಪಿಸೋಣ ಎಂದು ಸಂಸದರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಮುಂಬರುವ ಜೂನ್ ನಿಂದ ಬಿತ್ತನೆ ಕಾರ್ಯಗಳು ಪ್ರಾರಂಭಗೊಳ್ಳಲಿವೆ. ಕಾಳಸಂತೆಯಲ್ಲಿ ಕಳಪೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳು ಸರಬರಾಜು ಆಗದಂತೆ ಎಚ್ಚರವಹಿಸಬೇಕು. ರೈತರಿಗೆ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳುವಂತೆ ಮನವೊಲಿಸಬೇಕು. ಕೃಷಿ, ರೈತರ ವಿಷಯಗಳಿಗೆ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ತಾಲ್ಲೂಕುಗಳಲ್ಲಿ ವಿವಿಧೆಡೆ ಸಮರ್ಪಕ ಮೀನು ಮಾರುಕಟ್ಟೆಗಳಿಲ್ಲ, ಎಲ್ಲಿ ಬೇಕೆಂದರಲ್ಲಿ ಮಾರುವುದು ಕಂಡುಬರುತ್ತಿದ್ದು, ಅವರಿಗೆ ಪೂರಕವಾದ ಮೀನು ಮಾರುಕಟ್ಟೆ ಒದಗಿಸಬೇಕು ಎಂದು ಮೀನುಗಾರಿಕೆ ಉಪನಿರ್ದೇಶಕರಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಹಾಗೂ ಸಮುದಾಯ ಆಸ್ಪತೆಗಳನ್ನು ಮೇಲ್ದರ್ಜೆಗೇರಿಸಲು ಮತ್ತು ವೈದ್ಯಕೀಯ ಸೌಕರ್ಯಗಳು ಬೇಕಿದ್ದರೆ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಬೇಕು ಎಂದು ಜಿಲ್ಲಾ ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಮಗುವೊಂದರ ಶೈಕ್ಷಣಿಕ ಬುನಾದಿಯಾದ ಅಂಗನವಾಡಿಗಳು ಸುಧಾರಣೆಯಾಗಬೇಕು. ಜಿಲ್ಲೆಯಲ್ಲಿ ಬಹುತೇಕ ಎಲ್ಲಾ ಅಂಗನವಾಡಿ ಕಟ್ಟಡಗಳು ಸ್ವಂತ ಜಾಗ ಹೊಂದಿರಬೇಕು ಎಂದರಲ್ಲದೇ, ಮಕ್ಕಳಿಗೆ, ಗರ್ಭಿಣಿ ಮಹಿಳೆಯರಿಗೆ ಗುಣಮಟ್ಟದ ಪೌಷ್ಠಿಕ ಆಹಾರ ಪೂರೈಕೆ ಮಾಡಬೇಕು. ಜಿಲ್ಲೆಯಲ್ಲಿ ಅಪೌಷ್ಠಿಕತೆ ಹೋಗಲಾಡಿಸಲು ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕು. ಜಿಲ್ಲೆಯಲ್ಲಿ ಹೆಚ್ಚಾಗಿ ಅಕ್ರಮ ಪಡಿತರ ಸಾಗಾಣೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗುತ್ತಿದ್ದು, ಕಡಿವಾಣ ಹಾಕಲು ಮುಲಾಜಿಲ್ಲದೇ ಅಂತಹವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಿಗೆ ನಿರ್ದೇಶನ ನೀಡಿದರು.

ಸಂಡೂರು ಶಾಸಕಿ ಈ.ಅನ್ನಪೂರ್ಣ ಅವರು ಮಾತನಾಡಿ,ಸಂಡೂರುಭಾಗದಗೊಲ್ಲರಹಟ್ಟಿಗಳಲ್ಲಿ ಹೆಣ್ಣುಮಕ್ಕಳು ಋತುಮತಿ ಯಾದಾಗ ಮತ್ತು ಹೆರಿಗೆಯಾದಾಗ ಅವರನ್ನು ಹೊರಗಿಡುವ ಮೌಢ್ಯ ಆಚರಣೆ ಇಲ್ಲಿದೆ. ಮೌಢ್ಯತೆ ಹಾಗೂ ಮೂಢನಂಬಿಕೆಗಳನ್ನು ಇನ್ನು ನಂಬುತ್ತಿದ್ದಾರೆ. ಹಾಗಾಗಿ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ವಹಿಸಬೇಕು ಎಂದು ಪ್ರಸ್ತಾಪಿಸಿದರು. ವಿವಿಧ ಇಲಾಖೆಗಳ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಮತ್ತಿತರರು ಉಪಸ್ಥಿತರಿದ್ದರು.


#### ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ

ಜಿಲ್ಲೆಯಲ್ಲಿ ಈ ಬಾರಿಯ ಎಸ್ ಎಸ್ ಎಲ್ ಸಿ ವಾರ್ಷಿಕ ಫಲಿತಾಂಶವು ಕುಸಿತಗೊಂಡಿದ್ದು, ಬೇಸರದ ಸಂಗತಿಯಾಗಿದೆ. ಮಕ್ಕಳಿಗೆ ಪ್ರಾಥಮಿಕ ಹಂತದ ಶಿಕ್ಷಣ ಬಹುಮುಖ್ಯವಾಗಿದ್ದು, ಗುಣಮಟ್ಟದ ಮೌಲ್ಯಾಧಾರಿತ ಶಿಕ್ಷಣ ಒದಗಿಸಬೇಕು. ಇದಕ್ಕೆ ಶಿಕ್ಷಕರು ಹೆಚ್ಚಿನ ಶ್ರಮ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಶಿಕ್ಷಣ ಎಂದರೆ ಕೇವಲ ಕಟ್ಟಡವಲ್ಲ, ವೆಚ್ಚಧಾರಿತ ಉಪಕರಣಗಳಲ್ಲ, ಬದಲಾಗಿ ಮಕ್ಕಳ ಶೈಕ್ಷಣಿಕ ಬೆಳವಣಿಯಾಗಿದೆ. ಹಾಗಾಗಿ ಶಿಕ್ಷಕರು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದರು.

---

# ಸಮರ್ಪಕ ನೀರು ಪೂರೈಕೆಗೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಕೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ 12ನೇ ವಾರ್ಡ್ ರಾಮ ಲಿಂಗೇಶ್ವರ ದೇಸ್ಥಾನದ ಬಳಿ ಸಮರ್ಪಕ ನೀರು ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಸೋಮವಾರ ಪಟ್ಟಣ ಪಂಚಾಯ್ತಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ 12ನೇ ವಾರ್ಡ್ ರಾಮಲಿಂಗೇಶ್ವರ ದೇವಸ್ಥಾನದ ಬಳಿ ರಸ್ತೆ ಕಾಮಗಾರಿ ನಡೆಸುತ್ತಿದ್ದು, ಅಲ್ಲಿ ಪೈಪ್ ಲೈನ್ ಹೊಡೆದು ಒಂದು ವಾರದಿಂದ ಈ ಭಾಗದಲ್ಲಿ ನೀರು ಬಂದಿರುವುದಿಲ್ಲ. ಅದ್ದರಿಂದ ತಕ್ಷಣ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಪಟ್ಟಣ ಪಂಚಾಯ್ತಿ ಎಂಜನಿಯರು ರಾಮಚಂದ್ರ ಗೊಲ್ಲರ ಹಾಗೂ ಎಸ್‌ಡಿಎ ಕೆ. ರಾಧಾ ಮನವಿ ಸ್ವೀಕರಿಸಿದರು.

ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವರಮನೆ ಮಹೇಶ, ತಾಲ್ಲೂಕು ಅಧ್ಯಕ್ಷ ಬಾಣದ ಮಾರುತಿ, ಹಸಿರು ಸೇನೆ ಅಧ್ಯಕ್ಷ ಬಿ. ನವೀನ್ ಕುಮಾರ್, ಉಪಾಧ್ಯಕ್ಷ ಫಾಯಜ್, ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಹೇಮಂತ್ ಪಾಲ್ಗೊಂಡಿದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ನಿಮ್ಮ ಸಂದೇಶ ಜಗತ್ತಿನೆಡೆಗೆ, ಜಾಹೀರಾತು ನಿಮ್ಮದು, ಪ್ರಸಾರ ನಮ್ಮದು!
1 ನಂ ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಮುದ್ರಿತ ಜಾಹೀರಾತಿಗೆ ಮಾತ್ರ ಶುಲ್ಕ ಡಿಜಿಟಲ್ ಆವೃತ್ತಿ ಉಚಿತ*!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ
ಹಂಪಿ ಟೈಮ್ಸ್ ಇ-ಪೇಪರ್
*conditions apply
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್